## 2 ನೇ ಹೆಚ್ಚುವರಿ ಪ್ರಥಮ ದರ್ಜೆಯ  ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ನಂಜನಗೂಡು

**ಸಿ.ಸಿ ನಂ.1005-2018** **ಡಿ. ಡಬ್ಲುಃ 1**

| | |
|---|---|
| ಸಾಕ್ಷಿದಾರರ ಹೆಸರು<br>ವಾಸ್ತವ್ಯ | ಮಾಲಯ್ಯ<br>ಮಧುವನಹಳ್ಳಿ, ಕೊಳ್ಳೇಗಾಲ ತಾಲ್ಲೂಕು. |
| | **ಸತ್ಯ ಪ್ರತಿಜ್ಞೆಯ ಮೇರೆಗೆ  ದಿನಾಂಕ** 09-04-2025. |

**ಮಧ್ಯಂತರ ಅರ್ಜಿಯ ಆದೇಶದ ಮೇರೆಗೆ ಡಿ.ಡಬ್ಲೂ-1 ರವರ ಮುಂದುವರೆದ ಪಾಟೀ ಸವಾಲುಃ ಪಿರ್ಯಾದಿ ಪರ ಶ್ರೀ ಎ.ಪಿ.ಎಂ.ಬಿ ವಕೀಲರಿಂದಃ**

ನಾನು  ಬಣ್ಣಾರಿ ಅಮ್ಮನ್ ಶುಗರ್ ಲಿಮಿಟೆಡ್ ನಲ್ಲಿ ಕೆಲಸ ಮಾಡುತ್ತಿದ್ದಾಗ ಹಣ ದುರುಪಯೋಗ ಮಾಡಿಕೊಂಡಿದ್ದೆನು ಎಂದು ನನ್ನ ಮೇಲೆ ಪ್ರಕರಣ ದಾಖಲಾಗಿತ್ತು  ಎಂದರೆ ಸರಿಯಲ್ಲ.  ನಿಪಿ-1 ಅಳಂಗಚಿ ಶಾಖೆಯ ಕಾವೇರಿ ಗ್ರಾಮೀಣ ಬ್ಯಾಂಕಿಗೆ ಸೇರಿದ ಚೆಕ್ಕಾಗಿರುತ್ತದೆ ಎಂದರೆ ಸರಿ. ನಿಡಿ-9 ಎಸ್.ಬಿ.ಐ ಗೆ ಸೇರಿದ Statement of Account ಆಗಿರುತ್ತದೆ  ಎಂದರೆ ಸರಿಯಲ್ಲ. ಅಳಂಗಚಿ ಶಾಖೆಯ ಕಾವೇರಿ ಗ್ರಾಮೀಣ ಬ್ಯಾಂಕಿಗೆ ಸೇರಿದ  Statement of Account ಅನ್ನು ನೀಡಲು ನಿಮಗೆ ತೊಂದರೆ ಇದೆಯೇ ಎಂಬ ಪ್ರಶ್ನೆಗೆ ಸಾಕ್ಷಿ ತೊಂದರೆ ಇರುವುದಿಲ್ಲ ಎಂದು ನುಡಿಯುತ್ತಾರೆ. ನಾನು ಪಿರ್ಯಾದಿದಾರರಿಂದ ಹಣ ಪಡೆದಾಗ ಪಿರ್ಯಾದಿದಾರರಿಗೆ ಎಸ್.ಬಿ.ಐ ಬ್ಯಾಂಕಿನ ಚೆಕ್ ಅನ್ನು ನೀಡಲು

ನನಗೆ ತೊಂದರೆ ಇರಲಿಲ್ಲ. ನನ್ನ Statement of Account ನ ಪ್ರಕಾರ ದಿ.31-12-2017 ರಂದು ನನ್ನ ಖಾತೆಯಲ್ಲಿ ಕೇವಲ ರೂ.305/- ಇರುತ್ತದೆ ಎಂದರೆ ಸರಿ. ದಿ.04-12-2017 ರಂದು ನನ್ನ ಬಳಿ ಹಣ ಇತ್ತು ಎಂದು ತೋರಿಸಲು ಯಾವುದೇ ದಾಖಲಾತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ, ಆ ಸಮಯ ನಾನು ಹಣವನ್ನು ಬ್ಯಾಂಕಿನಲ್ಲಿ ಇಟ್ಟಿರಲಿಲ್ಲ ಎಂದು ನುಡಿಯುತ್ತಾರೆ. ದಿ.04-12-2017 ರಂದು ನನ್ನ ಬಳಿ ಹಣ ಇತ್ತು ಎಂದು ತೋರಿಸಲು ಯಾವುದಾದರೂ ದಾಖಲಾತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ಸಿದ್ಧರಿದ್ದೀರಾ ಎಂಬ ಪ್ರಶ್ನೆಗೆ ಸಾಕ್ಷಿ ನನಗೆ ಹಾಜರುಪಡಿಸಲು ಸಾಧ್ಯವಿಲ್ಲ ಎಂದು ನುಡಿಯುತ್ತಾರೆ. ನಾನು ಪಿರ್ಯಾದಿದಾರರಿಂದ ಪಡೆದಿರುವ ಸಾಲದ ಹಣವನ್ನು ಮರುಪಾವತಿ ಮಾಡುವ ಭಾದ್ಯತೆಯಿಂದ ತಪ್ಪಿಸಿಕೊಳ್ಳುದ್ದೇದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.  ನಾನು ಬಣ್ಣಾರಿ ಅಮ್ಮನ್ ಶುಗರ್ ಲಿಮಿಟೆಡ್ ನ ಲೆಕ್ಕ ತಃಖ್ತೆ ಶಾಖೆಯಲ್ಲಿ ಗುಮಾಸ್ತನಾಗಿ ಕರ್ತವ್ಯ ನಿರ್ವಹಿಸುತ್ತಿದ್ದೆನು. ನನ್ನನ್ನು ಬಣ್ಣಾರಿ ಅಮ್ಮನ್ ಶುಗರ್ ಲಿಮಿಟೆಡ್ ನವರು ಕೆಲಸದಿಂದ ತೆಗೆದು ಹಾಕಿದರು ಎಂದರೆ ಸರಿ. ನಾನು ಬಣ್ಣಾರಿ ಅಮ್ಮನ್ ಶುಗರ್ ಲಿಮಿಟೆಡ್ ನಲ್ಲಿ ಸುಮಾರು ರೂ.30,00,000/- ಗಳ ಹಣವನ್ನು ದುರುಪಯೋಪಡಿಸಿಕೊಂಡಿರುತ್ತೇನೆ ಎಂದು ಕೇಸು ದಾಖಲಾಗಿರುತ್ತದೆ ಎಂಬ

ಪ್ರಶ್ನೆಗೆ ಸಾಕ್ಷಿ ಕೇಸು ದಾಖಲಾಗಿರುವುದು ನಿಜ, ಅದರೆ ನಾನು ಯಾವುದೇ ಹಣವನ್ನು ದುರುಪಯೋಗಪಡಿಸಿಕೊಂಡಿರುವುದಿಲ್ಲ ಎಂದು ನುಡಿಯುತ್ತಾರೆ. ನಾನು ಪಿರ್ಯಾದಿದಾರರಿಗೆ ಮೋಸ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

**ಓ . ಹೇ. ಕೇ. ಸರಿ. ಇದೆ**

**ಸಹಿ/-**

**2 ನೇ ಕಿ.ಪ್ರ.ದ. ನ್ಯಾ ದಂ. ನಂಜನಗೂಡು**